ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಮಂಗಳವಾರ 5ನೇ ಮಾರ್ಚ್ 1996 ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (**ಶ್ರೀ ರಮೇಶ್ ಕುಮಾರ್**) ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಸ್. ಚಂದ್ರಶೇಖರ್ ನಾಯಕ್ : ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಒದಗಿಸಲಾದ ಉತ್ತರದ ಪ್ರತಿ ನನಗೆ ತಲುಪಿಲ್ಲ.

ಅಧ್ಯಕ್ಷರು : ಉತ್ತರವನ್ನು ಮಾನ್ಯ ಮಂತ್ರಿಗಳು ಈಗ ತಮಗೆ ಕಳುಹಿಸಿ ಕೊಡುತ್ತಾರೆ. ನಾನು ತಮ್ಮ ಪ್ರಶ್ನೆಯನ್ನು ನಂತರ ತೆಗೆದುಕೊಳ್ಳುತ್ತೇನೆ.

ಅನುಕಂಪ ಆಧಾರದ ನೇಮಕಾತಿ.

137 - ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಮುಖ್ಯಮಂತ್ರಿಯವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅನುಕಂಪ ಆಧಾರದ ನೇಮಕಾತಿಗಳನ್ನು ಯಾವಾಗ ಮಾಡಲಾಗುವುದು.

ಆ) ನೇಮಕಾತಿ ನಿಲ್ಲಿಸಿರುವುದರಿಂದ ಬಡ ಜನರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಇ) ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು (ವಿವರ ನೀಡುವುದು)?

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಅನುಕಂಪ ಆಧಾರದ ನೇಮಕಾತಿಯ ಹೊಸ ನಿಯಮಾವಳಿಗಳನ್ನು ಶೀಘ್ರದಲ್ಲಿ ಹೊರಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಬಂದಿದೆ.

ಇ) ಮೇಲಿನ (ಅ)ಕ್ಕೆ ನೀಡಿರುವ ಉತ್ತರ ಇದಕ್ಕೂ ಅನ್ವಯಿಸುತ್ತದೆ.

ಶ್ರೀ ಯು.ಆರ್. ಸಭಾಪತಿ : ಸನ್ಮಾನ್ಯ ಸಭಾಧ್ಯಕ್ಷರೇ, ಅನುಕಂಪದ ಆಧಾರದ ಮೇಲೆ ನೇಮಕಾತಿಗಳನ್ನು ಮಾಡುವುದು ಅನೇಕ ಸಂತ್ರಸ್ತ ಕುಟುಂಬಗಳಲ್ಲಿ ಒಬ್ಬನೇ ಜೀವನಾಧಾರವಾಗಿರುವಂತಹ ಕುಟುಂಬಗಳ ಕಣ್ಣೀರು ಒರೆಸುವ ಕಾರ್ಯಕ್ರಮ ಆಗಿದೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪ್ರಪ್ರಥಮ. 'ಜನತಾ ದರ್ಶನ' ಕಾರ್ಯಕ್ರಮದಲ್ಲಿ ಈ ಬಗ್ಗೆ ನೂರಾರು ಅರ್ಜಿಗಳನ್ನು ಸ್ವೀಕಾರ ಮಾಡಿದಾಗ, ಈ ಬಗ್ಗೆ ಒಂದು ತಿಂಗಳೊಳಗಾಗಿ ಆಜ್ಞೆ ನೀಡುವುದಾಗಿ ಹೇಳಿದ್ದರು. ಈ ಬಗ್ಗೆ ತೀರ್ಮಾನಿಸಲು ವಿಳಂಬ ಏಕೆ? ಈ ಬಗ್ಗೆ ಸಚಿವ ಸಂಪುಟದಲ್ಲಿ ಏನಾದರೂ ಭಿನ್ನಾಭಿಪ್ರಾಯ ಇದೆಯೇ?

ಶ್ರೀ ಎಂ. ಪಿ. ಪ್ರಕಾಶ್ (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ, ಈ ಅನುಕಂಪದ ಆಧಾರದ ಮೇಲೆ ಕೆಲಸವನ್ನು ಕೊಡುವಂತಹ ವಿಚಾರದಲ್ಲಿ ಮಾಡಿದಂತಹ ಸರ್ಕಾರಿ ಆಜ್ಞೆಯನ್ನು ಕರ್ನಾಟಕ ಆಡಳಿತ ಮಂಡಳಿಯವರು ದಿನಾಂಕ 20.10.94ರಂದು ರದ್ದು ಮಾಡಿದರು. ಆ ನಂತರ ಸರ್ವೋಚ್ಚ ನ್ಯಾಯಾಲಯಕ್ಕೆ ಆ ತೀರ್ಪಿನ ವಿರುದ್ಧ ಸರ್ಕಾರವು ಮೇಲ್ಮನವಿಯನ್ನು ಸಲ್ಲಿಸಿತು. ಸರ್ವೋಚ್ಚ ನ್ಯಾಯಾಲಯವೂ ಕೂಡ ದಿನಾಂಕ 10.7.95 ರಂದು ನಾವು ಸಲ್ಲಿಸಿದ ಮೇಲ್ಮನವಿಯನ್ನು ತಿರಸ್ಕರಿಸಿತು. ಇದರಿಂದಾಗಿ ಅದಕ್ಕೆ ಹೊಸ ನಿಯಮಾವಳಿಗಳನ್ನು ರಚಿಸಬೇಕಾಗಿದೆ. ಯಾವುದನ್ನು ಅನುಕಂಪದ ಆಧಾರದ ಮೇಲೆ ನಾವು ಕೆಲಸವನ್ನು ಕೊಡಬೇಕು ಎಂದು ಭಾವಿಸುತ್ತೇವೆ, ಅದು ನಿಯಮಾವಳಿಗಳ ರಚನೆ ಇಲ್ಲದೇ ಮಾಡಿರುವುದರಿಂದ ತೊಂದರೆಯಾಗುತ್ತದೆ, ತಪ್ಪಾಗುತ್ತದೆ ಎಂದು ಸರ್ವೋಚ್ಚ ನ್ಯಾಯಾಲಯ ನಿರ್ಣಯ ಮಾಡಿದ್ದರಿಂದ, ನಾವು ಈಗ ನಿಯಮಾವಳಿಗಳನ್ನು ರಚನೆ ಮಾಡಿದ್ದೇವೆ. ಹಿಂದಿನ ಸಚಿವ ಸಂಪುಟದ ಸಭೆಯಲ್ಲಿ ಈ ವಿಚಾರ ಪ್ರಸ್ತಾಪಕ್ಕೆ ಬಂದಿತ್ತು. ಈ ಸಲದ ಸಚಿವ ಸಂಪುಟದ ಸಭೆಯಲ್ಲಿ ಅದಕ್ಕೆ ನಾವು ಒಪ್ಪಿಗೆಯನ್ನು ಕೊಡುತ್ತೇವೆ.

ಶ್ರೀ ಎಸ್. ಯೋಗೀಶ್ ಭಟ್ : ಎಷ್ಟು ದಿವಸಗಳಲ್ಲಿ ಆ ಬಗ್ಗೆ ನಿರ್ಣಯ ಆಗಬಹುದು?

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೂ ಕೂಡ ಮೃತ ನೌಕರನ ಪತ್ನಿ (ವಿಧವೆ) ಅವಿವಾಹಿತ ಹೆಣ್ಣುಮಗಳು ಮತ್ತು ಗಂಡು ಮಕ್ಕಳನ್ನು ಮಾತ್ರ ಮೃತನೌಕರನ ಮೇಲೆ ಅವಲಂಬಿತವಾಗಿರತಕ್ಕ ಕುಟುಂಬ ವರ್ಗ ಎಂದು ಪರಿಗಣಿಸಲಾಗಿತ್ತು. ಅದಲ್ಲದೇ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆಯವರನ್ನೂ ಸಹ ನೇಮಕಾತಿ ಮಾಡಿದಂತಹ ಉದಾಹರಣೆಗಳು ಇದ್ದವು. ನೌಕರನು ಮೃತನಾಗಿ 10-20 ವರ್ಷಗಳಾಗಿದ್ದರೂ ಸಹ, ವಿಳಂಬವನ್ನು ಮನ್ನಾ ಮಾಡಿ ನೇಮಕಾತಿಯನ್ನು ಮಾಡಿರತಕ್ಕ ಉದಾಹರಣೆಗಳೂ ಕೂಡ ಇದ್ದವು. ಅನುಕಂಪದ ಆಧಾರದ ಮೇಲೆ ನೀವು ನೇಮಕಾತಿ ಮಾಡುತ್ತೇವೆ ಎಂದಾಗ, ಅದು-10 ವರ್ಷಗಳಷ್ಟು ವಿಳಂಬವಾಗಬಾರದು, ಶೀಘ್ರವಾಗಿ ಮಾಡುತ್ತೇವೆ ಎಂದಾಗ, ಅದು 10 ವರ್ಷಗಳಷ್ಟು ವಿಳಂಬವಾಗಬಾರದು, ಶೀಘ್ರವಾಗಿ ಆಗಬೇಕು ಎಂಬ ಅಭಿಪ್ರಾಯವನ್ನು ಸರ್ವೋಚ್ಚ ನ್ಯಾಯಾಲಯ ವ್ಯಕ್ತಪಡಿಸಿದೆ. ಈಗ ರಚನೆ ಮಾಡುತ್ತಿರುವ ಕರಡು ನಿಯಮಾವಳಿಗಳ ಪ್ರಕಾರ, ಪ್ರಾಯಶಃ ಆರು ತಿಂಗಳೊಳಗಾಗಿ ಅರ್ಹತೆಯನ್ನು ಪಡೆದ ಮೃತ ನೌಕರನ ಅವಲಂಬಿತ ಕುಟುಂಬ ವರ್ಗದವರು ನೇಮಕಾತಿಗಾಗಿ ಅರ್ಜಿಯನ್ನು ಹಾಕಬಹುದು ಎಂದು ಮಾಡಿದ್ದೇವೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೇ, ಇತರ ಕಲವು ವರ್ಷಗಳಿಂದ ಬಾಕಿಯಿದ್ದ ಅರ್ಜಿಗಳು ಇನ್ನೂ ಇತ್ಯರ್ಥವಾಗದೇ ಇರುವುದರಿಂದ, ತಾವು ರಚಿಸಲಿರುವ ನಿಯಮಗಳು ಅವುಗಳಿಗೂ ಕೂಡ ಅನ್ವಯವಾಗುವಂತಹುದೇ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಸುಪ್ರೀಂ ಕೋರ್ಟ್ ಮತ್ತು ಕರ್ನಾಟಕ ನ್ಯಾಯ ಮಂಡಳಿಯ ಆದೇಶಗಳ ಹಿನ್ನೆಲೆಯಲ್ಲಿ ಈ ನಿಯಮಾವಳಿಗಳ ಪ್ರಕಾರ ಯಾರು ಅದರ ಅಂಕಿತದಲ್ಲಿ ಬರುವುದಿಲ್ಲವೋ ಅವರ ಅರ್ಜಿಗಳನ್ನು ಪುರಸ್ಕಾರ ಮಾಡಲಿಕ್ಕಾಗುವುದಿಲ್ಲ.

ರಾಜ್ಯಕ್ಕೆ ವಿದೇಶಿಯರ ಅನಧಿಕೃತ ಪ್ರವೇಶ.

139 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಕ್ಕೆ ಅನಧಿಕೃತವಾಗಿ ಬಂದಿರುವ ವಿದೇಶಿಯರನ್ನು ಗುರುತಿಸಲು ಕಾರ್ಯ ಯೋಜನೆಯನ್ನು ಪೋಲೀಸ್ ಇಲಾಖೆ ಹಾಕಿಕೊಂಡಿದೆಯೇ?

ಆ) ಮಾಡಿದ್ದಲ್ಲಿ ಎಷ್ಟು ಜನರ ಅಕ್ರಮ ವಿದೇಶಿಯರನ್ನು ಗುರುತಿಸಲಾಗಿದೆ?

ಇ) ಗುರುತಿಸಲ್ಪಟ್ಟವರಲ್ಲಿ ಯಾವ ಯಾವ ದೇಶದವರು ಎಷ್ಟಷ್ಟು?

ಈ) ಇವರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಮಂತ್ರಿಗಳು) :

ಅ) ಹೌದು.

ಆ) 7 (ಏಳು)

ಇ) ಶ್ರೀಲಂಕಾ - 4

ಟಿಬೇಟಿಯನ್ನ - 3

ಈ) ಈ 7 ಮಂದಿ ವಿದೇಶಿಯರ ಮೇಲೆ ವಿದೇಶಿಯರ ಅಧಿನಿಯಮ ೧೯೪೬ರ ಅನ್ವಯ ಕ್ರಮ ಜರುಗಿಸಲಾಗಿದೆ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳಿಂದ ಉತ್ತರ ನನಗೆ ಬಂದಿದೆ. ಆದರೆ ಸಮಂಜಸವಾದಂತಹ ಉತ್ತರ ಇದರಲ್ಲಿ ಇಲ್ಲ ಎಂದು, ನನ್ನ ಭಾವನೆ. ಇದಕ್ಕೆ ಕಾರಣ ಏನೆಂದರೆ, ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಫಾರಿನ್ ಇನಫಿಲಟ್ರೇಟರ್ಸ ಹೆಚ್ಚಿಗೆ ಬರುತ್ತಿದ್ದಾರೆ, ಇಡೀ ದೇಶದಲ್ಲಿ ಕರ್ನಾಟಕ ಇದರ ಕೇಂದ್ರವಾಗಿದೆ, ಆ ದೃಷ್ಟಿಯಲ್ಲಿ ಜಾಗೃತವಾಗಿರಬೇಕು ಎನ್ನುವುದರ ಬಗ್ಗೆ ಕೇಂದ್ರ ಸರ್ಕಾರದಿಂದ ಯಾವುದಾದರೂ ಕೂಡ ಸೂಚನೆಗಳು ತಮಗೆ ಬಂದಿವೆಯೇ ಎಂಬ ಬಗ್ಗೆ ಮಾನ್ಯ ಗೃಹ ಸಚಿವರು ತಿಳಿಸಬೇಕು. ಎರಡನೆಯದಾಗಿ, ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು,